# ಮುಸ್ಲಿಮ್ ತಂದೆಯ ಪರವಾಗಿ ಸದಕಾ ಮತ್ತು ಉಪವಾಸ

# ﴿الصوم والصدقة عن الوالد المسلم]

[Kannada – ಕನ್ನಡ – كنادي ]


ಅಶ್ಶೈಖ್ ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ

الشيخ محمد ناصر الدين الألباني

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ترجمة: محمد حمزة بتوري



2014 - 1435

IslamHouse.com

بِسْمِ اللهِ الرَّحْمَـٰنِ الرَّحِيم

ಅಶ್ಶೈಖ್ ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ ತಮ್ಮ ಸಿಲ್ಸಿಲತುಲ್ 'ಅಹಾದೀಸಿ ಸ್ಸಹೀಹಃ'ದಲ್ಲಿ (484) ಹೇಳುತ್ತಾರೆ:

ಪ್ರವಾದಿ(ﷺ)ರವರು ಹೇಳಿದರು:

« أَمَّا أَبُوكَ فَلَوْ كَانَ أَقَرَّ بِالتَّوْحِيدِ فَصُمْتَ وَتَصَدَّقْتَ عَنْهُ نَفَعَهُ ذَلِكَ ».

"ತಮ್ಮ ತಂದೆ ತೌಹೀದ್‌ನಲ್ಲಿರುವವರಾಗಿದ್ದು ತಾವು ಅವರ ಪರವಾಗಿ ಉಪವಾಸ ಆಚರಿಸಿದರೆ ಮತ್ತು ದಾನಧರ್ಮ ಮಾಡಿದರೆ ಅದು ಅವರಿಗೆ ಪ್ರಯೋಜನ ಪಡುತ್ತದೆ."

ಇಮಾಮ್ ಅಹ್ಮದ್‌ರವರು ವರದಿ ಮಾಡಿದಂತೆ ಅಲ್‌ಆಸ್ ಇಬ್ನ್ ವಾಇಲ್‌ರವರು ಜಾಹಿಲಿಯ್ಯತ್‌ನಲ್ಲಿದ್ದಾಗ ನೂರು ಒಂಟೆಗಳನ್ನು ಬಲಿಕೊಡುವುದಾಗಿ ಹರಕೆ ಹೊತ್ತಿದ್ದರು. ಅವರ ಇಬ್ಬರು ಮಕ್ಕಳ ಪೈಕಿ ಹಿಶಾಮ್ ಇಬ್ನುಲ್ ಆಸ್‌ರವರು ತಮ್ಮ ಪಾಲಿನ ಐವತ್ತು ಒಂಟೆಗಳನ್ನು ಬಲಿಕೊಟ್ಟರು. ಆಗ ಇನ್ನೊಬ್ಬ ಮಗನಾದ ಅಮ್ರ್ ಇಬ್ನುಲ್ ಆಸ್ ಪ್ರವಾದಿ(ﷺ)ರವರೊಂದಿಗೆ ಇದರ ಬಗ್ಗೆ ಕೇಳಿದಾಗ ಪ್ರವಾದಿ (ﷺ)ರವರು ಮೇಲಿನಂತೆ ಉತ್ತರ ಕೊಟ್ಟರು.

ಮೃತ ತಂದೆ ಮತ್ತು ತಾಯಿ ಮುಸ್ಲಿಮರಾಗಿದ್ದರೆ ಅವರ ಪರವಾಗಿ ಮಕ್ಕಳು ಮಾಡುವ ದಾನಧರ್ಮ ಮತ್ತು ಉಪವಾಸಗಳು ಅವರಿಗೆ ಪ್ರಯೋಜನ ನೀಡುತ್ತದೆಯೆಂಬುದಕ್ಕೆ ಇದರಲ್ಲಿ ಪುರಾವೆಯಿದೆ. ಯಾಕೆಂದರೆ ಮಕ್ಕಳು ತಂದೆ ತಾಯಂದಿರ ಪರಿಶ್ರಮದ ಫಲವಾಗಿದ್ದಾರೆ. ಆದ್ದರಿಂದ ಈ ಕೆಳಗಿನ ಆಯತ್ತಿನ ಸಾರ್ವತ್ರಿಕ ಅರ್ಥದಲ್ಲಿ ಅವರೂ ಸೇರುತ್ತಾರೆ.

﴿ وَأَن لَّيْسَ لِلْإِنسَـٰنِ إِلَّا مَا سَعَىٰ ﴾

"ಮನುಷ್ಯನಿಗೆ ಅವನು ಪರಿಶ್ರಮಿಸಿದ್ದಲ್ಲದೆ ಬೇರೇನೂ ಲಭ್ಯವಾಗದು." [ಕುರ್‌ಆನ್ 53:39]

ಈ ಹದೀಸಿನಲ್ಲಿರುವ ಪ್ರಕಾರ ಮಕ್ಕಳು ಮಾಡುವ ಕರ್ಮಗಳ ಪ್ರತಿಫಲವು ಮುಸ್ಲಿಮರಾಗಿರುವ ಅವರ ತಂದೆ ಅಥವಾ ತಾಯಿಗೆ ತಲುಪುತ್ತದೆ. ಆದ್ದರಿಂದ ಈ

ಹದೀಸಿನಲ್ಲಿರುವ ವಿಷಯವನ್ನು ತಂದೆ ಅಥವಾ ತಾಯಿಗೆ ಮಾತ್ರ ಸೀಮಿತ ಗೊಳಿಸಬೇಕೇ ಹೊರತು ಮೃತಪಟ್ಟವರಿಗೆಲ್ಲ ತಲುಪುತ್ತದೆ ಎಂಬುದಕ್ಕೆ ಆಧಾರವನ್ನಾಗಿ ಮಾಡಬಾರದು. ಕೆಲವರು ಈ ಹದೀಸನ್ನು ಆಧಾರವಾಗಿಟ್ಟು ಮೃತಪಟ್ಟವರಿಗೆ ಹದ್ಯಾ ಮಾಡಿದರೆ ಅದರ ಪ್ರತಿಫಲವು ಅವರಿಗೆ ತಲುಪುತ್ತದೆ ಎನ್ನುತ್ತಾರೆ. ಇದು ತಪ್ಪು. ಯಾಕೆಂದರೆ ಹದೀಸಿನಲ್ಲಿ ಅದಕ್ಕೆ ಪುರಾವೆಯಿಲ್ಲ. ಹದೀಸಿನಲ್ಲಿರುವುದು ಮಕ್ಕಳು ಮಾಡುವ ಕರ್ಮಗಳ ಪ್ರತಿಫಲವು ಅವರ ತಂದೆ ತಾಯಿಗಳಿಗೆ ತಲುಪುತ್ತದೆ ಎಂಬುದು ಮಾತ್ರವಾಗಿದೆ.

ಮೃತಪಟ್ಟ ಯಾವುದೇ ವ್ಯಕ್ತಿಗೂ ಜೀವಂತವಿರುವ ವ್ಯಕ್ತಿ ಹದ್ಯಾ ಮಾಡುವ ಯಾವುದೇ ಕರ್ಮವೂ ತಲುಪುತ್ತದೆಯೆಂಬುದಕ್ಕೆ ಹದೀಸಿನಲ್ಲಿ ಯಾವುದೇ ಪುರಾವೆಯಿಲ್ಲ. ಆದರೆ ಕೆಲವೊಂದು ಕರ್ಮಗಳ ಹೊರತು. ಅವುಗಳ ಪೈಕಿ ಒಂದು ದುಆ (ಪ್ರಾರ್ಥನೆ). ಮೃತವ್ಯಕ್ತಿಗಾಗಿ ಪ್ರಾರ್ಥನೆ (ದುಆ) ಮಾಡಿದರೆ ಮತ್ತು ಅಲ್ಲಾಹು ಆ ಪ್ರಾರ್ಥನೆಗೆ ಉತ್ತರ ನೀಡಿದರೆ ಆ ಪ್ರಾರ್ಥನೆಯು ಮೃತವ್ಯಕ್ತಿಗೆ ಪ್ರಯೋಜನ ಪಡುತ್ತದೆ. 'ಅಹ್ಕಾಮುಲ್ ಜನಾಇಝ್' ಎಂಬ ನನ್ನ ಗ್ರಂಥದಲ್ಲಿ ನಾನಿದನ್ನು ವಿವರಿಸಿದ್ದೇನೆ.

ಅತಿರೇಕದಲ್ಲಿ ಮತ್ತು ಅಪೂರ್ಣತೆಯಲ್ಲಿ ಒಳಪಡದಿರುವುದಕ್ಕಾಗಿ ನಾವು ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಅರಿತುಕೊಳ್ಳಬೇಕಾಗಿದೆ.

ಒಟ್ಟಿನಲ್ಲಿ, ಮಕ್ಕಳು ತಮ್ಮ ತಂದೆ ಅಥವಾ ತಾಯಿಯ ಪರವಾಗಿ ದಾನಧರ್ಮ ಮಾಡಬಹುದು, ಉಪವಾಸ ಆಚರಿಸಬಹುದು, ಹಜ್ಜ್ ನಿರ್ವಹಿಸಬಹುದು, ಉಮ್ರಾ ನಿರ್ವಹಿಸಬಹುದು. ಯಾಕೆಂದರೆ ಮಕ್ಕಳು ತಂದೆ ತಾಯಂದಿರ ಪರಿಶ್ರಮದ ಫಲವಾಗಿದ್ದಾರೆ. ಈ ವಿಶೇಷತೆಯು ತಂದೆ ತಾಯಂದಿರ ಹೊರತು ಬೇರೆಯವರಿಗೆ ಇಲ್ಲ. ಈಗಾಗಲೇ ತಿಳಿಸಿದವುಗಳ ಹೊರತು.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********